ಕನ್ನಡಪ್ರಭ
ಮಂಗಳವಾರ 8.11.2016
ಬೆಂಗಳೂರು

# Mindtree
*Welcome to possible*

# ಮೈಂಡ್‌ಟ್ರೀ ಲಿಮಿಟೆಡ್

ನೋಂದಾಯಿತ ಕಚೇರಿ : ಗ್ಲೋಬಲ್ ವಿಲೇಜ್, RVCE ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560 059. ಕರ್ನಾಟಕ, ಭಾರತ
ಕಾರ್ಪೋರೇಟ್ ಗುರುತಿನ ಸಂಖ್ಯೆ (CIN): L72200KA1999PLC025564 | ದೂರವಾಣಿ : +91 80 6706 4000,
ಇ–ಮೇಲ್: investors@mindtree.com |ವೆಬ್‌ಸೈಟ್: www.mindtree.com

## ಸೂಚನೆ

ಕಂಪನೀ ಕಾಯಿದೆ, 2013 ಯ ಪರಿಚ್ಛೇದ 110 ಮತ್ತು ಇತರ ಅನ್ವಯವಾಗುವ ನಿಯಮಗಳು, ಜೊತೆಗೆ ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 (ಸದ್ಯಕ್ಕೆ ಜಾರಿಯಲ್ಲಿರುವ ಯಾವುದೇ ಶಾಸನಬದ್ಧ ಬದಲಾವಣೆಗಳು ಅಥವಾ ಮರುಅಧಿನಿಯಮಿತವಾದದ್ದನ್ನು ಒಳಗೊಂಡು), ಸೆಬಿ (ಲಿಸ್ಟಿಂಗ್ ಬಾಧ್ಯತೆಗಳು ಮತ್ತು ಅನಾವರಣದ ಅವಶ್ಯಕತೆಗಳು) ನಿಬಂಧನೆಗಳು, 2015 ಇವುಗಳನ್ನು ಓದಿಕೊಂಡಂತೆ, ಮತ್ತು ಅಂತಹ ಇತರ ಅನ್ವಯವಾಗುವ ಶಾಸನಗಳು ಮತ್ತು ನಿಬಂಧನೆಗಳ ಅನುಸಾರವಾಗಿ, ವಿದ್ಯುನ್ಮಾನ ವಿಧಾನದಲ್ಲಿ ಮತದಾನವನ್ನು ಒಳಗೊಂಡಂತೆ ಅಂಚೆ ಮತದಾನದ ಮೂಲಕ ಕೆಳಕಂಡ ವಿಷಯಗಳಿಗೆ ಮೈಂಡ್‌ಟ್ರೀ ಲಿಮಿಟೆಡ್ (ಮುಂದೆ ಕಂಪನಿ ಅಥವಾ ಸಂಸ್ಥೆ ಎಂದು ಕರೆಯಲಾಗುತ್ತದೆ) ಯ ಶೇರುದಾರರು/ಸದಸ್ಯರ ಅನುಮೋದನೆಯನ್ನು ಕೋರಲಾಗಿದೆ:

1. ಸ್ವತಂತ್ರ ನಿರ್ದೇಶಕರಾಗಿ ಶ್ರೀ ಅಕ್ಷಯ ಭಾರ್ಗವ (ಡಿಐಎನ್ 01874792) ಅವರ ನೇಮಕಾತಿ;
2. ಕಾರ್ಯಕಾರಿ ಉಪಾಧ್ಯಕ್ಷರಾಗಿ ಶ್ರೀ ನಮಕಲ್ ಶ್ರೀನಿವಾಸನ್ ಪಾರ್ಥಸಾರಥಿ (ಶ್ರೀ ಎನ್ ಎಸ್ ಪಾರ್ಥಸಾರಥಿ) (ಡಿಐಎನ್ 00146954) ಅವರ ನೇಮಕಾತಿ.

ಸೋಮವಾರ, ನವೆಂಬರ್ 7, 2016 ರಂದು ಸಂಸ್ಥೆಯು, ಡೆಪಾಸಿಟರಿ ಅಥವಾ ಸಂಸ್ಥೆಯಲ್ಲಿ ತಮ್ಮ ಇಮೇಲ್ ಐಡಿಯನ್ನು ನೋಂದಾಯಿಸಿರದ ಸದಸ್ಯರು/ಶೇರುದಾರರಿಗೆ, ಅಂಚೆ ಮತದಾನದ ಸೂಚನೆಯ ಜೊತೆಗೆ ಅಂಚೆ ಮತದಾನದ ಪ್ರಪತ್ರದ ಭೌತಿಕ ಪ್ರತಿಗಳ (ಜೊತೆಗೆ ಅಂಚೆ ಮತದಾನ ಪ್ರಪತ್ರದ ಸೂಚನೆಗಳನ್ನು) ಮತ್ತು ಸ್ವ–ವಿಳಾಸದ ವ್ಯಾವಹಾರಿಕ ಉತ್ತರ ಲಕೋಟೆಯನ್ನು (ಇದಕ್ಕೆ ತಗಲುವ ಅಂಚೆ ವೆಚ್ಚವನ್ನು ಸಂಸ್ಥೆಯು ಭರಿಸುತ್ತದೆ) ಈಗಾಗಲೇ ರವಾನಿಸಿದೆ.

ಸೋಮವಾರ, ನವೆಂಬರ್ 7, 2016 ರ ವೇಳೆಗೆ ಸಂಸ್ಥೆಯು, ಡೆಪಾಸಿಟರಿ ಅಥವಾ ಸಂಸ್ಥೆಯಲ್ಲಿ ತಮ್ಮ ಇಮೇಲ್ ಐಡಿಯನ್ನು ನೋಂದಾಯಿಸಿರುವ ಸದಸ್ಯರು/ಶೇರುದಾರರಿಗೆ, ಅಂಚೆ ಮತದಾನದ ಸೂಚನೆಯ ಜೊತೆಗೆ ಅಂಚೆ ಮತದಾನದ ಪ್ರಪತ್ರವನ್ನು (ಜೊತೆಗೆ ಅಂಚೆ ಮತದಾನ ಪ್ರಪತ್ರದ ಸೂಚನೆಗಳನ್ನು) ಮತ್ತು ಲಾಗಿನ್ ಐಡಿ ಮತ್ತು ಪಾಸ್ವರ್ಡ್ ಅನ್ನು ಈಗಾಗಲೇ ಇಮೇಲ್ ವಿಧಾನದಲ್ಲಿ, ನ್ಯಾಷನಲ್ ಸೆಕ್ಯುರಿಟೀಸ್ ಡೆಪಾಸಿಟರಿ ಲಿಮಿಟೆಡ್ (NSDL) ಮೂಲಕ ಕಳಿಸಿದೆ.

ಸಂಸ್ಥೆಯ ನಿರ್ದೇಶಕರ ಮಂಡಳಿಯು ಅಂಚೆ ಮತದಾನದ ಪ್ರಕ್ರಿಯೆಯನ್ನು ನ್ಯಾಯಬದ್ಧ ಮತ್ತು ಪಾರದರ್ಶಕವಾಗಿ ನಡೆಸಲು ಶ್ರೀನಾಗೇಂದ್ರ ಡಿ ರಾವ್, ಪ್ರಾಕ್ಟೀಸಿಂಗ್ ಕಂಪನಿಯ ಕಾರ್ಯದರ್ಶಿ, ಅವರನ್ನು ಪರಿಶೋಧಕರನ್ನಾಗಿ ನೇಮಿಸಿಕೊಂಡಿದ್ದು, ಪರಿಶೋಧಕರಾಗಿ ಕಾರ್ಯನಿರ್ವಹಿಸಲು ಶ್ರೀ ನಾಗೇಂದ್ರ ಡಿ ರಾವ್ ಅವರು ಒಪ್ಪಿಕೊಂಡಿರುತ್ತಾರೆ.

ಮಂಗಳವಾರ, ನವೆಂಬರ್ 8, 2016ರಂದು ಬೆಳಿಗ್ಗೆ 10 ಗಂಟೆಗೆ ಅಂಚೆ ಮತದಾನ ಮತ್ತು ಇ–ಮತದಾನದ ಮೂಲಕ ಮತದಾನ ಪ್ರಕ್ರಿಯೆ ಆರಂಭವಾಗಲಿದ್ದು, ಬುಧವಾರ, ಡಿಸೆಂಬರ್ 7, 2016 ರಂದು ಸಂಜೆ 5 ಕ್ಕೆ ಅಂತ್ಯವಾಗಲಿದೆ.

ಈವರೆಗೂ ಅಂಚೆ;ಮತದಾನದ ಪ್ರಪತ್ರಗಳನ್ನು ಪಡೆಯದಿರದ ಸದಸ್ಯರು/ಶೇರುದಾರರು ಇದರ ಪ್ರತಿಯನ್ನು ಪಡೆಯಲು ಸಂಸ್ಥೆಯ ನೋಂದಾಯಿತ ಕಛೇರಿಯ ವಿಳಾಸ ಗ್ಲೋಬಲ್ ವಿಲ್ಲೇಜ್, RVCE ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560 059 ಗೆ ಪತ್ರ ಬರೆಯಬಹುದು ಅಥವಾ ಸಂಸ್ಥೆಯ ಜಾಲತಾಣ (www.mindtree.com)ದಿಂದ ಮತದಾನ ಪ್ರಪತ್ರವನ್ನು ಡೌನ್ಲೋಡ್ ಮಾಡಿಕೊಳ್ಳಬಹುದು.

ಸದಸ್ಯರು/ಶೇರುದಾರರು ಸೂಕ್ತವಾಗಿ ಭರ್ತಿಮಾಡಿದ ಮತ್ತು ರುಜು ಮಾಡಿದ ಅಂಚೆ ಮತದಾನದ ಪ್ರಪತ್ರವನ್ನು ಬುಧವಾರ, ಡಿಸೆಂಬರ್ 7, 2016 ಸಂಜೆ 5ರ ಒಳಗೆ ಪರಿಶೋಧಕರಿಗೆ ತಲುಪುವಂತೆ ಕಳಿಸತಕ್ಕದ್ದು. ಬುಧವಾರ, ಡಿಸೆಂಬರ್ 7, 2016 ಸಂಜೆ 5 ರ ನಂತರ ಪಡೆಯಲಾದ ಎಲ್ಲಾ ಮತದಾನದ ಪ್ರಪತ್ರಗಳು ಅಸಿಂಧುವಾಗಿದ್ದು, ಈ ಸಮಯದ ನಂತರ ಅಂಚೆ ಮತದಾನಕ್ಕೆ ಅನುಮತಿ ಇರುವುದಿಲ್ಲ.

ಬುಧವಾರ, ಡಿಸೆಂಬರ್ 7, 2016 ಸಂಜೆ 5 ರ ನಂತರ ವಿದ್ಯುನ್ಮಾನ ವಿಧಾನದ ಮೂಲಕವೂ ಮತದಾನಕ್ಕೆ ಅನುಮತಿ ಇರುವುದಿಲ್ಲ.

ಅಂಚೆ ಮತದಾನದ ಸೂಚನೆ ಮತ್ತು ಅಂಚೆ ಮತದಾನದ ಪ್ರಪತ್ರವು (ಅಂಚೆ ಮತದಾನ ಪ್ರಪತ್ರದ ಸೂಚನೆಯ ಜೊತೆಗೆ) ಸಂಸ್ಥೆಯ ಜಾಲತಾಣ www.mindtree.com ದಲ್ಲಿ ಮತ್ತು NSDLನ ಜಾಲತಾಣ https://www.evoting.nsdl.com ದಲ್ಲಿ ಲಭ್ಯವಿರುತ್ತದೆ.

ಪರಿಶೋಧನೆಯು ಪೂರ್ಣಗೊಂಡ ನಂತರ ಪರಿಶೋಧಕರು ತಮ್ಮ ವರದಿಯನ್ನು, ನಿರ್ದೇಶಕರ ಮಂಡಳಿಯ ಸಭಾಧ್ಯಕ್ಷರಿಗೆ/ಯಾವುದೇ ನಿರ್ದೇಶಕರಿಗೆ/ಕಂಪನಿಯ ಕಾರ್ಯದರ್ಶಿಗೆ ಸಲ್ಲಿಸುತ್ತಾರೆ ಮತ್ತು ಸಂಸ್ಥೆಯ ಜಾಲತಾಣ www.mindtree.com ದಲ್ಲಿ ಮತ್ತು ಸಂಸ್ಥೆಯು ನೋಂದಾಯಿತವಾಗಿರುವ ಸ್ಟಾಕ್ ಎಕ್ಸ್ಚೇಂಜ್‌ಗಳಿಗೆ ಸಂದೇಶ ನೀಡುವ ಮೂಲಕ ಅಂಚೆ ಮತದಾನದ ಫಲಿತಾಂಶಗಳನ್ನು ಶುಕ್ರವಾರ, ಡಿಸೆಂಬರ್ 9, 2016 ಸಂಜೆ 7 ಗಂಟೆಗೆ ಅಥವಾ ಅದರೊಳಗೆ ಘೋಷಿಸಲಾಗುವುದು.

ಅಂಚೆಯ ಮೂಲಕ ಮತದಾನದ ಮತ್ತು ವಿದ್ಯುನ್ಮಾದ ವಿಧಾನದಲ್ಲಿ ಮತದಾನದ ಬಗ್ಗೆ ಯಾವುದೇ ವಿಚಾರಣೆಗಳಿಗೆ/ದೂರುಗಳಿಗೆ ಸಂಪರ್ಕಿಸಬೇಕಾದ ವ್ಯಕ್ತಿ:
ಕಂಪನಿಯ ಕಾರ್ಯದರ್ಶಿ, ಮೈಂಡ್‌ಟ್ರೀ ಲಿಮಿಟೆಡ್ – ಗ್ಲೋಬಲ್ ವಿಲ್ಲೇಜ್, RVCE ಅಂಚೆ, ಮೈಸೂರು ರಸ್ತೆ, ಬೆಂಗಳೂರು – 560059, ದೂ,: + 91 80 6706 4000, ಇಮೇಲ್ - investors@mindtree.com.

ಅಥವಾ

ರೆಜಿಸ್ಟ್ರಾರ್ ಮತ್ತು ಶೇರ್ ವರ್ಗಾವಣೆ ಏಜೆಂಟ್, ಲಿಂಕ್ ಇನ್‌ಟೈಮ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಸಿ–13, ಪನ್ನಾಲಾಲ್ ಸಿಲ್ಕ್ ಮಿಲ್ಸ್ ಆವರಣ, LBS ಮಾರ್ಗ್, ಭಂಡುಪ್ (ಪಶ್ಚಿಮ), ಮುಂಬಯಿ 400 078, ಭಾರತ, ದೂ.: +91 22 2594 6970, ಇಮೇಲ್: rnt.helpdesk@linkintime.co.in.

ಮಂಡಳಿಯ ಆದೇಶದ ಮೇರೆಗೆ
ಮೈಂಡ್‌ಟ್ರೀ ಲಿ ಪರವಾಗಿ

ಸ್ಥಳ: ಬೆಂಗಳೂರು
ದಿನಾಂಕ: ನವೆಂಬರ್ 8, 2016

ವೇದವಲ್ಲಿ.ಎಸ್.
ಕಂಪನಿ ಕಾರ್ಯದರ್ಶಿ



ಕನಿಷ್ಠ ವೇತನ ಹೆಚ್ಚಳ ಮಾಡುವಂತೆ ಆಗ್ರಹಿಸಿ ... ಮತ್ತು ಕೆಲಸಗಾರರ ಸಮನ್ವಯ ಸಮಿತಿ ವತಿಯ ... ಪ್ರತಿಭಟನೆ ನಡೆಯಿತು.